Administrative Officer of the Rayapur Dairy

214. Sri Y. S. PATIL (Graduates' Constituency).—

Will the Minister of State for Veterinary Services, Animal Husbandry and Dairy Development be pleased to state :—

(*a*) the reasons for combining the post of the Administrative Officer in Rayapur Dairy, Hubli-Dharwar Municipal Corporation area with the post of Project Officer, Intensive Cattle Development Programme ;

(*b*) the time of the officer that is being devoted for the dairy work and for the I. C. D. P.;

(*c*) the progress of the I. C. D. P. after it was started at Dharwar ?

Sri B. RACHAIAH (Minister for Agriculture).—

(*a*) In the interest of better administration.

(*b*) The officer being common he devotes equal attention and time for both the functions.

(*c*) Started on 7th January 1969 and making steady progress.

ಶ್ರೀ ವೈ. ಎಸ್. ಪಾಟೀಲ್.—ಡೈರಿಯ ನಿರ್ವಹಣಾಧಿಕಾರಿ ಮತ್ತು ಹುದ್ದೆ, ಪಶು ಅಭಿವೃದ್ಧಿ ವಿಸ್ತರಣಾಧಿಕಾರಿ ಹುದ್ದೆ ಈ ಎರಡು ಕಾರ್ಯಗಳನ್ನೂ ಒಬ್ಬರಿಗೇ ಕೊಟ್ಟಿದ್ದೀರಿ. ಈ ರೀತಿ ಒಬ್ಬರಿಗೇ ಕೊಟ್ಟಿದ್ದರಿಂದ ಎರಡೂ ಕೆಲಸಗಳೂ ನರಿಯಾಗಿ ಆಗದೇ ಇರುವುದರಿಂದ ಸಾರ್ವಜನಿಕರಿಗೆ, ಹಾಸ್ಪಿಟಲ್‌ಗಳಿಗೆ ಹಾಲು ಸಾಕಷ್ಟು ಸಪ್ಲೈ ಆಗುತ್ತಿಲ್ಲ. ಆದುದರಿಂದ ಇವೆರಡಕ್ಕೂ ಬೇರೆ ಬೇರೆ ಯವರನ್ನು ಅಪಾಯಿಂಟ್ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

† ಶ್ರೀ ಬಿ. ರಾಚಯ್ಯ.—ಮೊದಲು ಪ್ರಾಜೆಕ್ಟ್ ಆಫೀಸರು ಯಾರು ಇದ್ದರು ಅವರು ಕ್ಲಾಸ್ 2 ಆಫೀಸರು. ಅವರು ಮುಂದೆ ಬೆಳಗಾಂ ಡೈರಕ್ಟರ್, ಡೈರಕ್ಟ್ ಕಂಟ್ರೋಲ್‌ನಲ್ಲಿ ಇದ್ದರು. ಕ್ಲಾಸ್ 1 ಆಫೀಸರು ಇದೇ ಜಿರ್ಲೆಯಲ್ಲಿರುವುದರಿಂದ ಅವರ ಕೈಕೆಳಗೆ 4 ಜನ ಕ್ಲಾಸ್ 2 ಆಫೀಸರು ಇದ್ದಾರೆ. ಒಬ್ಬೊಬ್ಬರೂ ಬೇರೆ ಬೇರೆ ವಿಭಾಗಗಳನ್ನು ನೋಡಿಕೊಂಡು ಹೋಗುತ್ತಾರೆ. Now the Class I Officer can co-ordinate the work efficiently.

ಶ್ರೀ ವೈ. ಎಸ್. ಪಾಟೀಲ್.—ಇಷ್ಟಾದರೂ ಕೂಡ ಹಾಲಿನ ಪೂರೈಕೆ ಸಾರ್ವಜನಿಕರಿಗೆ ಹಾಸ್ಪಿಟಲ್‌ಗೆ ನರಿಯಾಗಿ ಆಗದೇ ಇರುವುದಕ್ಕೆ ಕಾರಣ ಏನು ?

ಶ್ರೀ ಬಿ. ರಾಚಯ್ಯ.—ಮಳೆಗಾಲದಲ್ಲಿ ಹಾಲು ಜಾಸ್ತಿ ಸಿಕ್ಕುತ್ತದೆ. ಬೇಸಿಗೆ ಕಾಲದಲ್ಲಿ ಹಾಲು ಅಷ್ಟು ಸಪ್ಲೈ ಆಗುವುದಿಲ್ಲ. ಇದು 17 ವರ್ಷದಿಂದಲೂ ಕೂಡ ಹೀಗಿದೆ.

ಶ್ರೀ ವೈ. ಎಸ್. ಪಾಟೀಲ್.—(ಸಿ)ಗೆ ಉತ್ತರವಾಗಿ Started on 7-1-1969 and making steady progress ಎಂದು ಹೇಳಿದ್ದೀರಿ. May I know how much money has been invested in the I.C.D.P. and what are the returns from this ?

ಶ್ರೀ ಬಿ. ರಾಚಯ್ಯ.—ಈಗ ಸೊಸೈಟಿಗಳ ಮುಖಾಂತರವಾಗಿ ಹಸುಗಳನ್ನು ಕೊಂಡು ಕೊಳ್ಳುವುದಕ್ಕಾಗಿ ಮೂರು ತಿ ಗಳಿಂದೀಚೆಗೆ ಸುಮಾರು 85 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. Incentive to cattle development and insemination centres ನಲ್ಲಿ ಹಸುಗಳನ್ನು ಕೊಂಡುಕೊಳ್ಳತಕ್ಕವರಿಗೆ ಹಣ ಕೊಡತಕ್ಕದ್ದು ಇದೆ. ಈ ಎಲ್ಲಾ ಕೆಲಸಕಾರ್ಯಗಳಲ್ಲೂ ಕೂಡ ಅವರು ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದಾರೆ.